ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

WWW.SHIKARAT.COM

2023
MWD

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ

ಪ್ರಶ್ನೆ ಪುಸ್ತಿಕೆ

Entrance Exam for UPSC/KPSC Coaching

ವರ್ಷನ್ ಕೋಡ್

**A**

ಸಮಯ : 2 ಗಂಟೆಗಳು

# ಸೂಚನೆಗಳು

1. OMR ಉತ್ತರ ಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಗಳು ಎನ್ ಕೋಡ್ ಮಾಡುವ ಮೊದಲು ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆ ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು.ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆಪುಸ್ತಿಕೆಯ ವರ್ಷನ್ ಕೋಡ್ A,B,C ಅಥವಾ D ಅನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

   | ನೋಂದಣಿ ಸಂಖ್ಯೆ |
   | --- |
   | |

4. ಈ ಪ್ರಶ್ನೆಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪ್ರತಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ **ಅತ್ಯುತ್ತಮವೆನಿಸುವ** ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು **ಕೇವಲ ಒಂದು ಉತ್ತರ**ವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ **ಕಪ್ಪು** ಅಥವಾ **ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೂ** ಉತ್ತರಿಸಿರಿ. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರವನ್ನು ಗುರುತಿಸಲು ಪ್ರಾರಂಭಿಸುವ ಮೊದಲು ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಕೊಠಡಿ ಮೇಲ್ವಿಚಾರಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ ಗುರುತು ಮಾಡಿರಿ.
8. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಕೊಠಡಿ ಮೇಲ್ವಿಚಾರಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.
11. ಯಾವುದೇ ರೀತಿಯ ಕ್ಯಾಲಕ್ಯುಲೇಟರಗಳನ್ನು ಬಳಸಲು ಅನುಮತಿ ಇಲ್ಲ.

**ಈ ಪುಸ್ತಕವನ್ನು ತೆರಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.**

**Note** : English version of the instructions is printed on the back cover of this booklet.

SHIKARAT.COM

**Minority Welfare Department**
**Entrance Exam for UPSC/KPSC Coaching**
**Examination held on 08-10-2023**

## KEY CHART

**Question Booklet Series - 'A'**

**Total Marks : 100** **1 Marks for each question**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | ***B*** | 26 | ***A*** | 51 | ***B*** | 76 | ***C*** |
| 2 | ***A*** | 27 | ***D*** | 52 | ***A*** | 77 | ***C*** |
| 3 | ***B*** | 28 | ***A*** | 53 | ***A*** | 78 | ***A*** |
| 4 | ***B*** | 29 | ***D*** | 54 | ***A*** | 79 | ***A*** |
| 5 | ***C*** | 30 | ***C*** | 55 | ***A*** | 80 | ***C*** |
| 6 | ***B*** | 31 | ***B*** | 56 | ***D*** | 81 | ***D*** |
| 7 | ***C*** | 32 | ***B*** | 57 | ***D*** | 82 | ***C*** |
| 8 | ***D*** | 33 | ***B*** | 58 | ***A*** | 83 | ***D*** |
| 9 | ***B*** | 34 | ***C*** | 59 | ***A*** | 84 | ***B*** |
| 10 | ***D*** | 35 | ***B*** | 60 | ***C*** | 85 | ***B*** |
| 11 | ***B*** | 36 | ***C*** | 61 | ***D*** | 86 | ***B*** |
| 12 | ***C*** | 37 | ***C*** | 62 | ***A*** | 87 | ***C*** |
| 13 | ***D*** | 38 | ***D*** | 63 | ***B*** | 88 | ***D*** |
| 14 | ***C*** | 39 | ***D*** | 64 | ***C*** | 89 | ***D*** |
| 15 | ***A*** | 40 | ***C*** | 65 | ***D*** | 90 | ***C*** |
| 16 | ***D*** | 41 | ***A*** | 66 | ***B*** | 91 | ***B*** |
| 17 | ***A*** | 42 | ***C*** | 67 | ***C*** | 92 | ***D*** |
| 18 | ***B*** | 43 | ***D*** | 68 | ***C*** | 93 | ***A*** |
| 19 | ***A*** | 44 | ***C*** | 69 | ***D*** | 94 | ***B*** |
| 20 | ***B*** | 45 | ***C*** | 70 | ***C*** | 95 | ***B*** |
| 21 | ***C*** | 46 | ***A*** | 71 | ***A*** | 96 | ***B*** |
| 22 | ***C*** | 47 | ***A*** | 72 | ***B*** | 97 | ***A*** |
| 23 | ***A*** | 48 | ***A*** | 73 | ***A*** | 98 | ***C*** |
| 24 | ***B*** | 49 | ***A*** | 74 | ***D*** | 99 | ***D*** |
| 25 | ***C*** | 50 | ***A*** | 75 | ***C*** | 100 | ***B*** |

1. ಯಾವ ತಾಣಗಳು ಹರಪ್ಪ ನಾಗರೀಕತೆಗೆ ಸಂಬಂಧಿಸಿವೆ?
   1. ಕೋಟ್ ಡಿಜಿ
   2. ಲೋಥಾಲ್
   3. ಸುರ್ಕೋಟಡಾ
   4. ಇನಾಮಗಾಂವ್

   ಸರಿಯಾದ ಉತ್ತರವನ್ನು ಸಂಕೇತಗಳಿಂದ ಆಯ್ಕೆಮಾಡಿ

   A) 1 ಮತ್ತು 3 ಮಾತ್ರ
   B) 1, 2 ಮತ್ತು 3 ಮಾತ್ರ
   C) 2 ಮತ್ತು 4 ಮಾತ್ರ
   D) 2, 3, ಮತ್ತು 4 ಮಾತ್ರ

2. ಬಿಸ್ ಪಂಥಿ ಪಂಥವು ಯಾವ ಧರ್ಮಕ್ಕೆ ಸೇರಿದೆ?
   A) ಜೈನ ಧರ್ಮ
   B) ಶೈವ ಧರ್ಮ
   C) ಬೌದ್ಧಧರ್ಮ
   D) ವೈಷ್ಣವ ಧರ್ಮ

3. ಈ ಕೆಳಗಿನ ಯಾವ ಸ್ಥಳದಲ್ಲಿ ಹೊಯ್ಸಳ ದೇವಾಲಯಗಳಿವೆ?
   1. ಬೇಲೂರು
   2. ಅಮೃತಪುರ
   3. ಇಟಗಿ
   4. ಸೋಮನಾಥಪುರ

   ಸರಿಯಾದ ಉತ್ತರವನ್ನು ಸಂಕೇತಗಳಿಂದ ಆಯ್ಕೆಮಾಡಿ

   A) 1 ಮತ್ತು 2
   B) 1, 2 ಮತ್ತು 4
   C) 1 ಮತ್ತು 4
   D) ಮೇಲಿನ ಎಲ್ಲವೂ

4. ಭಾರತದ ರಾಷ್ಟ್ರ ಲಾಂಛನದಲ್ಲಿ ಕೆಳಗಿನ ಯಾವ ಪ್ರಾಣಿಗಳು ಕಂಡುಬರುತ್ತದೆ?
   1. ಸಿಂಹ
   2. ಹುಲಿ
   3. ಆನೆ
   4. ಒಂದು ಕೊಂಬಿನ ಘೇಂಡಾಮೃಗ

   ಸರಿಯಾದ ಉತ್ತರವನ್ನು ಆರಿಸಿ

   A) ಕೇವಲ ಒಂದು ಜೋಡಿ
   B) ಕೇವಲ ಎರಡು ಜೋಡಿ
   C) ಕೇವಲ ಮೂರು ಜೋಡಿ
   D) ಮೇಲಿನ ಎಲ್ಲವೂ

SHIKARAT.COM

WWW.SHIKARAT.COM

5. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ.

1. ಕೃಷ್ಣದೇವರಾಯನನ್ನು "ಆಂಧ್ರ ಭೋಜ" ಎಂದು ಕರೆಯಲಾಗುತ್ತಿತ್ತು.

2. ಪೋರ್ಚುಗೀಸ್ ಪ್ರವಾಸಿ ನ್ಯೂನಿಜ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು

3. ಅವನ ಆಸ್ಥಾನವು ಅಷ್ಟ ಪ್ರಧಾನಗಳೆಂಬ ಎಂಟು ಪ್ರಸಿದ್ಧ ವಿದ್ವಾಂಸರುಗಳಿಂದ ಅಲಂಕರಿಸಲ್ಪಟ್ಟಿತು.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

A) 1 ಮತ್ತು 2

B) 2 ಮತ್ತು 3

C) 1 ಮಾತ್ರ

D) ಮೇಲಿನ ಎಲ್ಲವೂ

6. ಇತ್ತೀಚಿಗೆ ಹೈದರಾಬಾದ್‌ನಲ್ಲಿ ನಿರ್ಮಿಸಲಾದ ಸಮಾನತೆಯ ತಿಮೆಯು ಈ ಯಾವ ಪ್ರಸಿದ್ಧ ವ್ಯಕ್ತಿಗೆ ಸಂಬಂಧಿಸಿದೆ.

A) ಶಂಕರಾಚಾರ್ಯ

B) ರಾಮಾನುಜ ಚಾರ್ಯ

C) ಸಂತ ಕಬೀರ್

D) ರಮಾನಂದ್

7. ಹುಮಾಯುನ್ ನಾಮ ಎಂಬ ಪುಸ್ತಕವನ್ನು ಬರೆದವರು ಯಾರು?

A) ಅಬುಲ್ ಫಜಲ್

B) ಹುಮಾಯೂನ್

C) ಗುಲ್ಬದನ್ ಬೇಗಂ

D) ಅಬ್ದ್ ಅಲ್ ಸಮದ್

8. ಈ ಕೆಳಗಿನ ಘಟನೆಗಳನ್ನು ಅವುಗಳ ಕಾಲಾನುಕ್ರಮದಲ್ಲಿ ಜೋಡಿಸಿ ಸರಿಯಾದ ಆಯ್ಕೆಯನ್ನು ಗುರುತಿಸಿ.

1. ನೆಹರು ವರದಿ 1928

2. ಎರಡನೇ ದುಂಡು ಮೇಜಿನ ಸಭೆ 1931

3. ಸೈಮನ್ ಆಯೋಗದ ರಚನೆ 1927

4. ಪೂನಾ ಒಪ್ಪಂದ 1932

A) 3,2,1,4

B) 1,4,2,3

C) 4,3,2,1

D) 3,1,2,4

WWW.SHIKARAT.COM

9. ಗಾಂಧೀಜಿಯವರ **ನನ್ನ ಸತ್ಯಾನ್ವೇಷಣೆ** ಕುರಿತು ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿಲ್ಲ

1. ಇದನ್ನು ಮೂಲತಃ ಇಂಗ್ಲೀಷ್ ಭಾಷೆಯಲ್ಲಿ ಬರೆಯಲಾಗಿದೆ

2. ಇದು ಅವರ ಬಾಲ್ಯದಿಂದ 1921 ರ ವರೆಗಿನ ಜೀವನವನ್ನು ಒಳಗೊಂಡಿದೆ.

3. ಈ ಪುಸ್ತಕವನ್ನು ಮೂಲತಃ ಎರಡು ಸಂಪುಟಗಳಲ್ಲಿ ಪ್ರಕಟಿಸಲಾಯಿತು, ಮೊದಲನೆಯದು 1927 ರಲ್ಲಿ ಮತ್ತು ಎರಡನೆಯದು 1929 ರಲ್ಲಿ

A) 1 ಮತ್ತು 2 ಮಾತ್ರ

B) ಕೇವಲ 1 ಮಾತ್ರ

C) 2 ಮತ್ತು 3 ಮಾತ್ರ

D) 1 ಮತ್ತು 3 ಮಾತ್ರ

10. ಮಾನ್ಯಂ ದಂಗೆಯ ನೇತೃತ್ವ ವಹಿಸಿದ್ದವರು?

A) ಬಿರ್ಸಾ ಮುಂಡಾ

B) ಲಚಿತ್ ಬೋರ್ಪುಕನ್

C) ಸಿದ್ದು ಮತ್ತು ಕನ್ನು ಮುರ್ಮು

D) ಅಲ್ಲೂರಿ ಸೀತಾ ರಾಮರಾಜು

11. ಮೈಸೂರಿನ ಮಹಾರಾಜರು ಎಲ್ಲಾ ವರ್ಗ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ನೀಡುವ ಅಗತ್ಯವನ್ನು ಮನಗೊಂಡು ಯಾವ ಸಮಿತಿಯನ್ನು ನೇಮಿಸಿದರು?

A) ನಾಗನಗೌಡ

B) ಜಸ್ಟೀಸ್ ಮಿಲ್ಲರ್

C) ವಿಶ್ವೇಶ್ವರಯ್ಯ

D) ಕಾಂತರಾಜ ಅರಸ್

12. ಮುಷ್ಕರ ಮಾಡುವ ಹಕ್ಕು (Right to strike) ಇದು

A) ಸಾಂವಿಧಾನಿಕ ಹಕ್ಕು

B) ಮೂಲಭೂತ ಹಕ್ಕು

C) ಶಾಸನಬದ್ಧ ಹಕ್ಕು

D) ಮೇಲಿನ ಯಾವುದೂ ಅಲ್ಲ

WWW.SHIKARAT.COM

13. ಭಾರತ ಸಂವಿಧಾನದ ಈ ಕೆಳಗಿನ ಯಾವ ವಿಧಿಯಲ್ಲಿ ಅಂತರರಾಜ್ಯ ಜಲ ವಿವಾದದ ಬಗ್ಗೆ ಉಲ್ಲೇಖಿಸಲಾಗಿದೆ?

A) 252

B) 263

C) 249

D) 262

14. ಭಾರತದ ಸಂವಿಧಾನದಲ್ಲಿ ಕೆಳಗಿನ ಯಾವ ಅನುಸೂಚಿ ಮತ್ತು ಅದರ ವಿವರಣೆ ಸರಿಯಾಗಿ ಹೊಂದಿಕೆಯಾಗುವುದಿಲ್ಲ ?

A) ಎರಡನೇ ಅನುಸೂಚಿ: ಪ್ರಮುಖ ಸಾಂವಿಧಾನಿಕ ಹುದ್ದೆಗಳ ವೇತನಗಳು

B) ಹನ್ನೊಂದನೇ ಅನುಸೂಚಿ: ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ವಿಷಯಗಳು

C) ಐದನೇ ಅನುಸೂಚಿ: ಫೆಡರಲ್ ರಚನೆ

D) ಎಂಟನೇ ಅನುಸೂಚಿ: ಅಧಿಕೃತ ಭಾಷೆಗಳು

15. ಭಾರತ ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖಿಸಲಾದ ಪದಗಳ ಸರಿಯಾದ ಅನುಕ್ರಮವನ್ನು ತಿಳಿಸಿ

A) ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ

B) ಸಮಾನತೆ, ಸ್ವಾತಂತ್ರ್ಯ, ನ್ಯಾಯ, ಭ್ರಾತೃತ್ವ

C) ಭ್ರಾತೃತ್ವ, ಸಮಾನತೆ, ಸ್ವಾತಂತ್ರ್ಯ, ನ್ಯಾಯ

D) ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ, ನ್ಯಾಯ

16. ಕೆಳಗಿನವರಲ್ಲಿ ಯಾರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿರಲಿಲ್ಲ?

A) ನೆಲ್ಲಿ ಸೇನ್ ಗುಪ್ತ

B) ಸರೋಜಿನ ನಾಯ್ಡು

C) ಅನ್ನಿ ಬೆಸೆಂಟ್ 1917

D) ಅರುಣಾ ಅಸಫ್ ಅಲಿ

WWW.SHIKARAT.COM

17. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಸಂವಿಧಾನದ 341 ನೇ ವಿಧಿಯು ಪರಿಶಿಷ್ಟ ಜಾತಿಗಳ ಸದಸ್ಯರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಒದಗಿಸುತ್ತದೆ.
2. ಪರಿಶಿಷ್ಟ ಜಾತಿಗಳ (SC) ಪಟ್ಟಿಯಲ್ಲಿ ಯಾವುದೇ ಜಾತಿಯನ್ನು ಸೇರಿಸುವ ಅಥವಾ ತೆಗೆದುಹಾಕುವ ಅಧಿಕಾರವನ್ನು ರಾಷ್ಟ್ರಪತಿಗೆ ಮಾತ್ರ ನೀಡಲಾಗಿದೆ.
3. ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ಪರಿಶಿಷ್ಟ ಜಾತಿಗಳ ಮೀಸಲಾತಿಗೆ ಅವಕಾಶವಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 1ಮಾತ್ರ
B) 2 ಮಾತ್ರ
C) 2 ಮತ್ತು 3 ಮಾತ್ರ
D) 1 ಮತ್ತು 3

18. ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ

1. ಸಾರ್ವಜನಿಕ ಖಾತೆಗಳ ಸಮಿತಿ
2. ಅಂದಾಜುಗಳ ಸಮಿತಿ
3. ಸಾರ್ವಜನಿಕ ಉದ್ದಿಮೆ ಸಮಿತಿ
4. ಸದಸ್ಯರ ಗೈರುಹಾಜರಿಯ ಸಮಿತಿ

ಮೇಲಿನ ಯಾವ ಸಮಿತಿಗಳು ಲೋಕಸಭೆಯ ಸದಸ್ಯರಿಂದ ಮಾತ್ರ ರಚಿಸಲ್ಪಟ್ಟಿವೆ

A) ಕೇವಲ ಒಂದು ಜೋಡಿ
B) ಕೇವಲ ಎರಡು ಜೋಡಿ
C) ಕೇವಲ ಮೂರು ಜೋಡಿ
D) ಮೇಲಿನ ಎಲ್ಲಾ

19. ಕೆಳಗಿನ ಯಾವ ವಿಧಿಯು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಅವಕಾಶಗಳನ್ನು ಸುರಕ್ಷಿತಗೊಳಿಸಲು ನಿಬಂಧನೆಗಳನ್ನು ಹೊಂದಿದೆ?

A) ವಿಧಿ 39
B) ವಿಧಿ 39ಎ
C) ವಿಧಿ 43ಎ
D) ವಿಧಿ 48 ಎ

WWW.SHIKARAT.COM

20. ರಾಜ್ಯದ ಉಪಮುಖ್ಯಮಂತ್ರಿ ಹುದ್ದೆಯನ್ನು ಕುರಿತು ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ ಮತ್ತು ಸರಿಯಾದುದನ್ನು ಆಯ್ಕೆಮಾಡಿ

1. ಒಂದು ರಾಜ್ಯವು 3 ಕ್ಕಿಂತ ಹೆಚ್ಚುಉಪಮುಖ್ಯಮಂತ್ರಿಗಳನ್ನು ಹೊಂದಿರುವಂತಿಲ್ಲ.
2. ಇದು ಸಾಂವಿಧಾನಿಕ ಹುದ್ದೆಯಲ್ಲ

A) 1 ಮಾತ್ರ
B) 2 ಮಾತ್ರ
C) 1 ಮತ್ತು 2 ಎರಡೂ
D) ಮೇಲಿನ ಯಾವುದೂ ಅಲ್ಲ

21.ಕೆಳಗಿನವುಗಳಲ್ಲಿ ಯಾವುದು ಸಾಂವಿಧಾನಿಕ ಸಂಸ್ಥೆ ಅಲ್ಲ?

A) ಚುನಾವಣಾ ಆಯೋಗ
B) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ
C) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ
D) ಸರಕು ಮತ್ತು ಸೇವಾ ತೆರಿಗೆ ಮಂಡಳಿ

22. ಇತ್ತೀಚೆಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡಲು ಸಂಸತ್ತಿನಲ್ಲಿ ಯಾವ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು

A) 125ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ
B) 124ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ
C) 128ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ
D) 126 ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ

23. ರಾಷ್ಟ್ರಪತಿಯಿಂದ ರಾಜ್ಯಸಭಾ ಸದಸ್ಯರ ನಾಮನಿರ್ದೇಶನ" ದ ಪರಿಕಲ್ಪನೆಯನ್ನು ಯಾವ ದೇಶದಿಂದ ಎರವಲು ಪಡೆಯಲಾಗಿದೆ?

A) ಐರ್ಲೆಂಡ್
B) ಕೆನಡಾ
C) ಬ್ರಿಟನ್
D) ಜರ್ಮನಿ

WWW.SHIKARAT.COM

24. ಭಾರತದ ಯಾವುದೇ ರಾಜ್ಯದಲ್ಲಿ ವಿಧಾನ ಪರಿಷತ್ ಅನ್ನು ರಚಿಸುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಯಾರಿಗೆ ನೀಡಲಾಗಿದೆ?

A) ರಾಷ್ಟ್ರಪತಿ

B) ರಾಜ್ಯ ಶಾಸಕಾಂಗವು ಈ ಕುರಿತು ನಿರ್ಣಯವನ್ನು ಅಂಗೀಕರಿಸಿದ ನಂತರ ಸಂಸತ್ತು

C) ಮುಖ್ಯಮಂತ್ರಿ

D) ಪ್ರಧಾನ ಮಂತ್ರಿ

25. ಭಾರತದಲ್ಲಿನ ಒಂದು ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯ ಬಲವನ್ನು ___ ನಿರ್ಧರಿಸುತ್ತಾರೆ

A) ರಾಜ್ಯದ ರಾಜ್ಯಪಾಲರು

B) ಭಾರತದ ಸಂಸತ್ತು

C) ಭಾರತದ ರಾಷ್ಟ್ರಪತಿ

D) ಭಾರತದ ಮುಖ್ಯ ನ್ಯಾಯಾಮೂರ್ತಿ

26. ಭಾರತದಲ್ಲಿ ಎಷ್ಟು ರಾಜಕೀಯ ಪಕ್ಷಗಳು ರಾಷ್ಟ್ರೀಯ ಪಕ್ಷದ ಸ್ಥಾನಮಾನವನ್ನು ಹೊಂದಿವೆ?

A) 6

B) 7

C) 5

D) 8

27. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ ವಿವಾದವನ್ನು ಇತ್ಯರ್ಥಪಡಿಸಲು ಈ ಕೆಳಗಿನವುಗಳಲ್ಲಿ ಯಾರಿಗೆ ಅಧಿಕಾರವನ್ನು ನೀಡಲಾಗಿದೆ?

A) ಅಂತರ ರಾಜ್ಯ ಮಂಡಳಿ.

B) ಭಾರತದ ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್.

C) ಭಾರತದ ಸಂವಿಧಾನದ 143ನೇ ವಿಧಿಯ ಅಡಿಯಲ್ಲಿ ಸುಪ್ರೀಂ ಕೋರ್ಟ್.

D) ಭಾರತದ ಸಂವಿಧಾನದ 131ನೇ ವಿಧಿಯ ಅಡಿಯಲ್ಲಿ ಸುಪ್ರೀಂ ಕೋರ್ಟ್.

28. ಭಾರತ ಸರ್ಕಾರವು ಸುಡಾನ್‌ನಿಂದ ಭಾರತೀಯರನ್ನು ಕರೆತರಲು ಕೈಗೊಂಡ ಕಾರ್ಯಾಚರಣೆಯ ಹೆಸರೇನು?

A) ಆಪರೇಷನ್ ಕಾವೇರಿ
B) ಆಪರೇಷನ್ ರಾಹತ್
C) ಆಪರೇಷನ್ ಸಹಾಯತ್
D) ಆಪರೇಷನ್ ಸಂಕಟ್ ಮೋಚನ್

29. ಕೆಳಗಿನ ಯಾವ ಮಿಶ್ರಲೋಹವು ಲೋಹವಲ್ಲದ ಒಂದು ಘಟಕವನ್ನು ಹೊಂದಿರುತ್ತದೆ.

A) ಹಿತ್ತಾಳೆ
B) ಕಂಚು
C) ಅಮಲ್ಗಮ್
D) ಉಕ್ಕು

30. ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1. ಭಾರತದ ಉಪ-ರಾಷ್ಟ್ರಪತಿಗಳು ಸಂಸತ್ತಿನ ಸದಸ್ಯರಿಂದ ಚುನಾಯಿತರಾಗುತ್ತಾರೆ.
2. ಉಪ-ರಾಷ್ಟ್ರಪತಿಗಳ ಚುನಾವಣೆಯಲ್ಲಿ ರಾಜ್ಯ ವಿಧಾನಸಭೆಗಳ ಸದಸ್ಯರೂ ಸಹ ಮತ ಚಲಾಯಿಸುತ್ತಾರೆ.
3. ಭಾರತದ ಉಪ-ರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ (Ex-officio) ಸಭಾಪತಿಯಾಗಿರುತ್ತಾರೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A) 1 ಮತ್ತು 2 ಮಾತ್ರ
B) 2 ಮತ್ತು 3 ಮಾತ್ರ
C) 1 ಮತ್ತು 3 ಮಾತ್ರ
D) ಎಲ್ಲಾ 1, 2 ಮತ್ತು 3

31. ಕೆಳಗಿನ ಪ್ರಕ್ರಿಯೆಗಳಲ್ಲಿ ಯಾವುದು ರಾಸಾಯನಿಕ ಕ್ರಿಯೆಯನ್ನು ಒಳಗೊಂಡಿರುತ್ತದೆ.

A) ಪೆಟ್ರೋಲ್ ಆವಿಯಾಗುವಿಕೆ
B) ಗಾಳಿಯಲ್ಲಿ ಮೆಗ್ನೀಷಿಯಮ್ ರಿಬ್ಬನ್ ಅನ್ನು ಸುಡುವುದು
C) ನೀರಿನಲ್ಲಿ ಉಪ್ಪು ಕರಗುವಿಕೆ
D) ಅನಿಲ ಸಿಲಿಂಡರ್‌ನ ಒತ್ತಡದಲ್ಲಿ ಆಮ್ಲಜನಕದ ಅನಿಲವನ್ನು ಸಂಗ್ರಹಿಸುವುದು

32. ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ರಾಸಾಯನಿಕ ಸೂತ್ರ

A) CaSo4
B) CaSo4 ½ H2O
C) CaCO3
D) Ca(OH)2

WWW.SHIKARAT.COM

D) ಬೆಂಗಳೂರು

33. ಇಸ್ರೋ ಇತ್ತೀಚೆಗೆ ಉಡಾವಣೆ ಮಾಡಿದ ಚಂದ್ರಯಾನ-3 ಮಿಷನ್ ಕುರಿತು ಈ ಕೆಳಗಿನ ಹೇಳಿಕೆಯನ್ನು ಗಮನಿಸಿ

1. ಕಾರ್ಯಾಚರಣೆಯಲ್ಲಿ ಉಡಾವಣಾ ವಾಹನವಾಗಿ ಪಿಎಸ್‌ಎಲ್‌ವಿಯನ್ನು ಬಳಸಲಾಗಿತ್ತು. LVM M
2. ಚಂದ್ರನ ದಕ್ಷಿಣ ಧ್ರುವದ ಬಳಿ ಯಶಸ್ವಿಯಾಗಿ ಸಾಫ್ಟ್ ಲ್ಯಾಂಡ್ ಮಾಡಿದ ವಿಶ್ವದ ಮೊದಲ ಮಿಷನ್ ಆಯಿತು ಮತ್ತು ಭಾರತವು ಚಂದ್ರನ ಮೇಲೆ ಸಾಫ್ಟ್ ಲ್ಯಾಂಡ್ ಮಾಡಿದ 4ನೇ ದೇಶವಾಯಿತು.

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆಯ್ಕೆಮಾಡಿ

A) 1 ಮಾತ್ರ
B) 2 ಮಾತ್ರ
C) 1 ಮತ್ತು 2
D) ಯಾವುದೂ ಇಲ್ಲ

34. ICMR ನ ರಾಷ್ಟ್ರೀಯ ವೈರಾಲಜಿ ಸಂಸ್ಥೆಯು ಎಲ್ಲಿದೆ.

A) ನಾಗ್ಪುರ
B) ಹೈದರಾಬಾದ್
C) ಪುಣೆ

35. ಈ ಕೆಳಗಿನ ಯಾವ ಜೀವ ಕಣದಂಗಗಳು ಬ್ಯಾಕ್ಟೀರಿಯಾ ಮತ್ತು ಯೀಸ್ಟ್ ಎರಡರಲ್ಲೂ ಇವೆ.

A) ಮೈಟೋಕಾಂಡ್ರಿಯಾ
B) ರೈಬೋಸೋಮ್‌ಗಳು
C) ಲೈಸೋಸೋಮ್‌ಗಳು
D) ಪೆರಾಕ್ಸಿಸೋಮ್ಸ್

36. ಕೆಳಗಿನವುಗಳಲ್ಲಿ ಯಾವುದು **ಭೂಮಿಯಿಂದ ಆಕಾಶಕ್ಕೆ** ಜಿಗಿಯಬಲ್ಲ ಕ್ಷಿಪಣಿ ಆಗಿದೆ?

A) ಅಗ್ನಿ
B) ನಾಗ್
C) ತ್ರಿಶೂಲ್
D) ಕೆ.15 ಸಾಗರಿಕಾ

37. ವೊಲ್ಬಾಚಿಯಾ ವಿಧಾನ ಇದಕ್ಕೆ ಸಂಬಂಧಿಸಿದೆ

A) ಕೃಷಿ ತ್ಯಾಜ್ಯವನ್ನು ಪ್ಯಾಕಿಂಗ್ ವಸ್ತುವಾಗಿ ಪರಿವರ್ತಿಸುವುದು.
B) ಜೈವಿಕ ವಿಘಟನೀಯ ಪ್ಲಾಸ್ಟಿಕ್‌ಗಳನ್ನು ತಯಾರಿಸುವುದು.
C) ಸೊಳ್ಳೆಗಳಿಂದ ಹರಡುವ ವೈರಾಣು ರೋಗಗಳನ್ನು ನಿಯಂತ್ರಿಸುವುದು.
D) ಜೈವಿಕ ತ್ಯಾಜ್ಯದಿಂದ ಪರಿಸರ ಸ್ನೇಹಿ ಇಂಧನವಾಗಿ ಪರಿವರ್ತಿಸುವುದು.

38. ಹೈಡ್ರೋಮೀಟರ್ ________
ಅನ್ನು ಅಳತೆ ಮಾಡಲು
ಬಳಸಲಾಗುತ್ತದೆ.
A) ಗಾಳಿಯಲ್ಲಿನ ಆರ್ದ್ರತೆ
B) ದ್ರವದ ಸ್ನಿಗ್ಧತೆ
C) ದ್ರವಗಳ ಮೇಲ್ಮೈ ಒತ್ತಡ
D) ದ್ರವಗಳ ಸಾಪೇಕ್ಷ ಸಾಂದ್ರತೆ

39. ಭಾರತದಲ್ಲಿ ಉದ್ಯೋಗ ಸ್ಥಿತಿ
ಸ್ಥಾಪಕತ್ವ ಹೆಚ್ಚಾಗಿ
ಕಂಡುಬರುವುದು ಈ ಕೆಳಗಿನ
ಯಾವ ವಲಯದಲ್ಲಿ
A) ಸಾರಿಗೆ
B) ಹಣಕಾಸಿನ ಸೇವೆ
C) ಸೇವಾ ವಲಯ
D) ಕಟ್ಟಡ ಉದ್ಯಮ

40. ನವೆಂಬರ್ 1, 1973 ರಲ್ಲಿ
ವಿಶಾಲ ಮೈಸೂರು ರಾಜ್ಯವನ್ನು
ಕರ್ನಾಟಕವೆಂದು
ಮರುನಾಮಕರಣ
ಮಾಡಲಾಯಿತು. ಆ
ಸಂದರ್ಭದಲ್ಲಿದ್ದ ರಾಜ್ಯದ
ರಾಜ್ಯಪಾಲರು ಯಾರು?
A) ದೇವರಾಜ ಅರಸ್.
B) ವಿ.ಎಸ್.ರಮಾದೇವಿ
C) ಮೋಹನ್‌ಲಾಲ್
ಸುಖಾಡಿಯ.
D) ಜಯಚಾಮರಾಜೇಂದ್ರ
ಒಡೆಯರ್.

41. European space agency
ಆರಂಭಿಸಿದ ಜ್ಯೂಸ್ (JUICE)
ಮಿಷನ್ ಅದ್ಯಯನ
ಮಾಡುವುದು
A) ಗುರು
B) ಶನಿ
C) ಶುಕ್ರ
D) ಬುಧ

42. ಕೆಳಗಿನ ಯಾವ ರಾಷ್ಟ್ರೀಯ
ಉದ್ಯಾನವನಗಳು ಪಶ್ಚಿಮ
ಘಟ್ಟಗಳ ಭಾಗವಾಗಿದೆ?
1. ಬಂಡೀಪುರ ರಾಷ್ಟ್ರೀಯ
ಉದ್ಯಾನ
2. ಗಿರ್ ರಾಷ್ಟ್ರೀಯ ಉದ್ಯಾನ
3. ಎರವಿಕುಲಂ ರಾಷ್ಟ್ರೀಯ
ಉದ್ಯಾನ
4. ತಡೋಬಾ ಅಂಧಾರಿ
ರಾಷ್ಟ್ರೀಯ ಉದ್ಯಾನ
ಕೆಳಗಿನ ಕೋಡ್ ಬಳಸಿ
ಸರಿಯಾಧ ಉತ್ತರವನ್ನು
ಆಯ್ಕೆಮಾಡಿ
A) 1, 3 ಮತ್ತು 4
B) 2, 3 ಮತ್ತು 4
C) 1 ಮತ್ತು 3 ಮಾತ್ರ
D) ಮೇಲಿನ ಎಲ್ಲಾ

43. ಕೆಳಗಿನವುಗಳಲ್ಲಿ ಯಾವುದು
ಕಾವೇರಿ ನದಿಯ ಬಲದಂಡೆಯ
ಉಪನದಿಯಾಗಿದೆ?
A) ಶಿಂಷಾ
B) ಹಾರಂಗಿ
C) ಅರ್ಕಾವತಿ
D) ಕಬಿನಿ

44. ಜಿನೆಟಿಕ್ ಇಂಜಿನಿಯರಿಂಗ್ ಅಪ್ರೈಸಲ್ ಕಮಿಟಿ (GEAC) ಇದು GM ಬೆಳೆಗಳಿಗೆ ನಿಯಂತ್ರಕವಾಗಿದೆ. ಇದು ಯಾವ ಸಚಿವಾಲಯದ ಅಡಿಯಲ್ಲಿ ಬರುತ್ತದೆ

A) ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ.

B) ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ.

C) ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ.

D) ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವಾಲಯ.

45. ಗಂಗಾ ನದಿಯ ಪಶ್ಚಿಮ ಹಿಮಾಲಯದಿಂದ ಬಂಗಾಳಕೊಲ್ಲಿಗೆ ಹರಿಯುವಾಗ ಈ ಕೆಳಗೆ ಕೊಟ್ಟ ಯಾವ ಸ್ಥಳಗಳಲ್ಲಿ ಕ್ರಮವಾಗಿ ಹಾದು ಹೋಗುತ್ತದೆ?

A) ಹರಿದ್ವಾರ್, ವಾರಣಾಸಿ, ಅಲಹಾಬಾದ್, ಬಹರಮ್‌ಪುರ.

B) ಹರಿದ್ವಾರ್, ಬಹರಮ್‌ಪುರ, ವಾರಣಾಸಿ, ಅಲಹಾಬಾದ್.

C) ಹರಿದ್ವಾರ್, ಅಲಹಾಬಾದ್, ವಾರಣಾಸಿ, ಬಹರಮ್‌ಪುರ.

D) ಹರಿದ್ವಾರ್, ಅಲಹಾಬಾದ್, ಬಹರಮ್‌ಪುರ, ವಾರಣಾಸಿ.

46. ಈಶಾನ್ಯ ಮಾನ್ಸೂನ್‌ಗಳಿಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1. ಜೂನ್‌ನಿಂದ ಸೆಪ್ಟೆಂಬರ್ ನಡುವಿನ ಅವಧಿಯನ್ನು ಈಶಾನ್ಯ ಮಾನ್ಸೂನ್ ಅವಧಿ ಎಂದು ಕರೆಯಾಲಾಗುತ್ತದೆ.
2. ತಮಿಳುನಾಡು ಈಶಾನ್ಯ ಮಾನ್ಸೂನ್‌ನಿಂದ ಅತಿ ಹೆಚ್ಚು ಮಳೆಯನ್ನು ಪಡೆಯುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ?

A) 1 ಮಾತ್ರ

B) 2 ಮಾತ್ರ

C) 1 ಮತ್ತು 2

D) 1 ಅಥವಾ 2 ಅಲ್ಲ

47. ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ:

1. ಜೋಗ ಜಲಪಾತವು ನೇತ್ರಾವತಿ ನದಿಯಿಂದ ಸೃಷ್ಟಿಯಾಗಿದೆ.
2. ಚಿರಾಪುಂಜಿ ಬಳಿ ಇರುವ ನೊಹ್ಕಾಲಿಕೈ ಜಲಪಾತವು ಭಾರತದ ಅತಿ ಎತ್ತರದಿಂದ ಧುಮುಕುವ ಜಲಪಾತವಾಗಿದೆ.
3. ಎಲಿಫೆಂಟ್ ಜಲಪಾತವು ಮಹಾರಾಷ್ಟ್ರ ರಾಜ್ಯದಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 2 ಮಾತ್ರ

B) 1, 2 ಮತ್ತು 3

C) 2 ಮತ್ತು 3 ಮಾತ್ರ

D) 1 ಮತ್ತು 3 ಮಾತ್ರ

WWW.SHIKARAT.COM

48. ಭೂಕಂಪದ ಅಲೆಗಳ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

1. ಪಿ-ತರಂಗಗಳು ಎಸ್-ತರಂಗಗಳಿಗಿಂತ ವೇಗವಾಗಿ ಚಲಿಸುತ್ತವೆ.
2. ಪಿ-ತರಂಗಗಳು ಘನ ಮಾಧ್ಯಮದ ಮೂಲಕ ಮಾತ್ರ ಚಲಿಸುತ್ತವೆ, ಆದರೆ ಎಸ್-ತರಂಗಗಳು ಘನ ಮತ್ತು ದ್ರವ ಮಾಧ್ಯಮದ ಮೂಲಕ ಚಲಿಸುತ್ತವೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 1 ಮಾತ್ರ
B) 1 ಮತ್ತು 2 ಮಾತ್ರ
C) 2 ಮಾತ್ರ
D) ಯಾವುದೂ ಅಲ್ಲ

49. ಸರಿಯಾದವುಗಳನ್ನು ಗುರುತಿಸಿ

1) ಬನಿಹಾಲ್ ಪಾಸ್ : ಜಮ್ಮು & ಕಾಶ್ಮೀರ
2) ನಾಥುಲಾ ಪಾಸ್ : ಸಿಕ್ಕಿಂ
3) ನಿತಿ ಪಾಸ್ : ಹಿಮಾಚಲ ಪ್ರದೇಶ
4) ಶಿಪ್ಕಿಲಾ : ಉತ್ತರಾಖಂಡ

A) 1 ಮತ್ತು 2 ಮಾತ್ರ
B) 2,3,4 ಮಾತ್ರ
C) 3 ಮತ್ತು 4 ಮಾತ್ರ
D) ಮೇಲಿನ ಎಲ್ಲವು

50. ಕರ್ನಾಟಕದ ಯಾವ ಪಕ್ಷಿಧಾಮ ವನ್ನು "ಪಕ್ಷಿ ಕಾಶಿ" ಎಂದು ಕರೆಯುತ್ತಾರೆ?

A) ರಂಗನತಿಟ್ಟು ಪಕ್ಷಿಧಾಮ
B) ಮಂಡಗದ್ದೆ ಪಕ್ಷಿಧಾಮ
C) ಗುಡವಿ ಪಕ್ಷಿಧಾಮ
D) ಅತ್ತಿವೇರಿ ಪಕ್ಷಿಧಾಮ

51. ಕೆಳಗಿನ ಯಾವ ಪರಿಸರ ವ್ಯವಸ್ಥೆಯು ಎರಡು ಅಥವಾ ಹೆಚ್ಚು ವೈವಿಧ್ಯಮಯ ಪರಿಸರ ವ್ಯವಸ್ಥೆಗಳ ನಡುವಿನ ಪರಿವರ್ತನಾ ವಲಯವನ್ನು ಉಲ್ಲೇಖಿಸುತ್ತವೆ?

A) ಬಯೋಮ್
B) ಇಕೋಟೋನ್
C) ಜೀವಗೋಳ
D) ಮೇಲಿನ ಯಾವುದೂ ಅಲ್ಲ

52. ಕೆಳಗಿನ ಯಾವ ವಿಧದ ಅರಣ್ಯವು ಭಾರತದಲ್ಲಿ ಅತಿ ಹೆಚ್ಚುಪ್ರದೇಶವನ್ನು ಹೊಂದಿದೆ?

A) ಉಷ್ಣವಲಯದ ತೇವಾಂಶವುಳ್ಳ ಎಲೆ ಉದುರುವ ಅರಣ್ಯ.
B) ಉಷ್ಣವಲಯದ ಒಣ ನಿತ್ಯಹರಿದ್ವರ್ಣ ಅರಣ್ಯ .
C) ಪರ್ವತದ ಆರ್ದ್ರ ಸಮಶೀತೋಷ್ಣ ಅರಣ್ಯ.
D) ಉಷ್ಣವಲಯದ ಆರ್ದ್ರ ನಿತ್ಯಹರಿದ್ವರ್ಣ ಅರಣ್ಯ.

WWW.SHIKARAT.COM

53. ಆಸ್ಕರ್ ಪ್ರಶಸ್ತಿ ವಿಜೇತ **"ಎಲಿಫೆಂಟ ವಿಸ್ಪರರ್"** ಸಾಕ್ಷ್ಯ ಚಿತ್ರವು ಭಾರತದ ಯಾವ ರಾಷ್ಟ್ರೀಯ ಉದ್ಯಾನವನಕ್ಕೆ ಸಂಬಂಧಿಸಿದೆ?
A) ಮಧುಮಲೈ ರಾಷ್ಟ್ರೀಯ ಉದ್ಯಾನವನ.
B) ಸತ್ಯಮಂಗಲ ರಾಷ್ಟ್ರೀಯ ಉದ್ಯಾನ.
C) ಎರಾವಿಕುಲಂ ರಾಷ್ಟ್ರೀಯ ಉದ್ಯಾನ.
D) ನಾಗರಹೊಳೆ ರಾಷ್ಟ್ರೀಯ ಉದ್ಯಾನ.

54. ಯಾವ ದೇಶವು ಯುನೈಟೆಡ್ ನೇಷನ್ಸ್ ವಾಟರ್ ಕಾನ್ಫರೆನ್ಸ್ 2023 ಅನ್ನು ಆಯೋಜಿಸಿದೆ?
A) ಯು.ಎಸ್.ಎ.
B) ಯು.ಕೆ.
C) ಭಾರತ
D) ಬಾಂಗ್ಲಾದೇಶ

55. ಕೆಳಗಿನ ಯಾವ ದೇಶದಲ್ಲಿ ಯುಎನ್ಎಫ್‌ಸಿಸಿಸಿ ಯ COP 28 ಸಮ್ಮೇಳನ ನಡೆಯಲಿದೆ?
A) ಯುನೈಟೆಡ್ ಅರಬ್ ಎಮಿರೇಟ್ಸ್
B) ಸೌದಿ ಅರೇಬಿಯಾ
C) ಅರ್ಜೆಂಟೀನಾ
D) ಭಾರತ

56. ಕೆಳಗಿನವುಗಳಲ್ಲಿ ಯಾವುದು ಜೀವವೈವಿಧ್ಯ ಸಂರಕ್ಷಣೆಯ ಇನ್‌ಸಿಟು (in-situ) ವಿಧಾನವಲ್ಲ?
A) ಜೀವಗೋಳ ಮೀಸಲು
B) ರಾಷ್ಟ್ರೀಯ ಉದ್ಯಾನಗಳು
C) ವನ್ಯಜೀವಿ ಅಭಯಾರಣ್ಯಗಳು
D) ಸಸ್ಯೋದ್ಯಾನವನ (ಬೊಟಾನಿಕಲ್ ಗಾರ್ಡನ್)

57. ಕೆಳಗಿನವುಗಳಲ್ಲಿ ಯಾವುದು ಹಸಿರುಮನೆ ಅನಿಲವಲ್ಲ?
A) ಇಂಗಾಲದ ಡೈಆಕ್ಸೈಡ್
B) ನೀರಾವಿ
C) ಮೀಥೇನ್
D) ಆಮ್ಲಜನಕ

58. ಭಾರತದ ಅಧಿಕೃತ ಜಿಡಿಪಿಯ ವರದಿಯನ್ನು ಪ್ರಕಟಿಸುವ ಸಂಸ್ಥೆ ಯಾವುದು?
A) ಕೇಂದ್ರೀಯ ಸಾಂಖ್ಯಿಕಾ ಇಲಾಖೆ
B) ಹಣಕಾಸು ಸಚಿವಾಲಯ
C) ಲೇಬರ್ ಬ್ಯೂರೋ
D) ಭಾರತೀಯ ರಿಸರ್ವ್ ಬ್ಯಾಂಕ್

WWW.SHIKARAT.COM

D) 1-b 2-d 3-a 4-c

59. ಜೈವಿಕ ವೈವಿಧ್ಯತೆ ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
   1. ನಾವು ಧ್ರುವಗಳಿಂದ ಸಮಭಾಜಕದ ಕಡೆಗೆ ಚಲಿಸುವಾಗ ಜೀವರಾಶಿಗಳ ವೈವಿಧ್ಯತೆ ಕಡಿಮೆಯಾಗುತ್ತದೆ.
   2. ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಹೆಚ್ಚಿನ ಜೀವರಾಶಿಗಳ ವೈವಿಧ್ಯತೆಯನ್ನು ಹೊಂದಿವೆ.

   ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ?
   A) 1 ಮಾತ್ರ
   B) 2 ಮಾತ್ರ
   C) 1 ಮತ್ತು 2
   D) ಯಾವುದೂ ಇಲ್ಲ

60. ಕೆಳಗಿನವುಗಳನ್ನು ಹೊಂದಿಸಿ

| ಜೌಗು ಪ್ರದೇಶ | ರಾಜ್ಯಗಳು. |
|---|---|
| 1.ಕಿಯೋಲಾಡಿಯಾ ರಾಷ್ಟ್ರೀಯ ಉದ್ಯಾನ | a. ರಾಜಸ್ಥಾನ |
| 2. ಲೋಕ್ಟಾಕ್ ಸರೋವರ | b. ಒಡಿಶಾ |
| 3. ಅಷ್ಟಮುಡಿ ಕೆರೆ | c. ಕೇರಳ |
| 4. ಚಿಲ್ಕಾ ಸರೋವರ | d. ಮಣಿಪುರ |

ಕೆಳಗಿನವುಗಳಿಂದಸರಿಯಾದ ಆಯ್ಕೆಯನ್ನು ಆರಿಸಿ
   A) 1-a 2-b 3-c 4-d
   B) 1-d 2-b 3-a 4-c
   C) 1-a 2-d 3-c 4-b

61. ಕರ್ನಾಟಕದ ಯಾವ ಆರ್ಥಿಕ ಸಚಿವರು ಅತಿ ಹೆಚ್ಚು ಬಜೆಟ್ ಮಂಡನೆ ಮಾಡಿದ್ದಾರೆ?
   A) ದೇವರಾಜ ಅರಸು
   B) ರಾಮಕೃಷ್ಣ ಹೆಗಡೆ
   C) ಬಿ ಎಸ್ ಯಡಿಯೂರಪ್ಪ
   D) ಸಿದ್ದರಾಮಯ್ಯ

62. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು R.B.I. ಬಗ್ಗೆ ಸತ್ಯವಲ್ಲ?
   A) ರಿಜರ್ವ್ ಬ್ಯಾಂಕು ಎಲ್ಲ ಮೌಲ್ಯದ ನೋಟು ಮತ್ತು ನಾಣ್ಯಗಳನ್ನು ಮುದ್ರಿಸಿ ಚಲಾವಣೆಯಲ್ಲಿ ತರುತ್ತದೆ.
   B) ರಿಜರ್ವ್ ಬ್ಯಾಂಕು ಹಣಕಾಸಿನ ನೀತಿಯನ್ನು ರೂಪಿಸುತ್ತದೆ.
   C) ರಿಜರ್ವ್ ಬ್ಯಾಂಕು ಪತ್ತನ್ನು ನಿಯಂತ್ರಿಸುತ್ತದೆ.
   D) ರಿಜರ್ವ್ ಬ್ಯಾಂಕು ತೀರುವೆ ಮನೆ (ಸಂದಾಯ) ಕಾರ್ಯ ಮಾಡುತ್ತಿದೆ.

SHIKARAT.COM

WWW.SHIKARAT.COM

63. ಪಟ್ಟಿ -I ನ್ನು ಪಟ್ಟಿ-II ರ ಜೊತೆ ಹೊಂದಿಸಿ

| ಪಟ್ಟಿ-I | ಪಟ್ಟಿ -II (ಸಮಿತಿ) |
|---|---|
| I. ಸಾರ್ವಜನಿಕ ರಂಗದ ಉದ್ದಿಮೆಗಳಲ್ಲಿ ಬಂಡವಾಳದ ಹಿಂದೆಗೆತ. | 1)ರಾಜಚೆಲ್ಲಯ್ಯ |
| II. ಕೈಗಾರಿಕಾ ಅನಾರೋಗ್ಯ | 2) ಓಂಕಾರ ಗೋಸ್ವಾಮಿ |
| III. ತೆರಿಗೆ ಸುದಾರಣೆಗಳು | 3)R.L.ಮಲ್ಹೋತ್ರ |
| IV. ವಿಮಾ ರಂಗದಲ್ಲಿ ಸುಧಾರಣೆಗಳು | 4)ಸಿ.ರಂಗರಾಜನ್ |

ಸರಿಯಾದ ಜೋಡಿಗಳನ್ನು ಆರಿಸಿ

| | I. | II. | III. | IV. |
|---|---|---|---|---|
| A) | 1 | 4 | 2 | 3 |
| B) | 4 | 2 | 1 | 3 |
| C) | 4 | 1 | 2 | 3 |
| D) | 1 | 3 | 4 | 2 |

64. WINDFALL (ಆಕಸ್ಮಿಕ) ತೆರಿಗೆ.

A) ರಿಯಲ್ ಎಸ್ಟೇಟ್ ಅಥವಾ ವೈಯಕ್ತಿಕ ಆಸ್ತಿಯಂತಹ ವಸ್ತುವಿನ ಮೌಲ್ಯಮಾಪನದ ಮೌಲ್ಯವನ್ನು ಆಧರಿಸಿದ ತೆರಿಗೆಯಾಗಿದೆ.

B) ತಮ್ಮ ಹಣವನ್ನು ಸ್ಟಾರ್ಟ್ ಅಪ್ ಗಳಲ್ಲಿ ಹೂಡಿಕೆ ಮಾಡುವುದು.

C) ನಿರ್ದಿಷ್ಟ ಕೈಗಾರಿಕೆಗಳು ಅನಿರೀಕ್ಷಿತ ಮತ್ತು ಸರಾಸರಿಗಿಂತ ಹೆಚ್ಚಿನ ಲಾಭವನ್ನು ಅನುಭವಿಸಿದಾಗ ಸರ್ಕಾರವು ವಿಧಿಸುವ ಹೆಚ್ಚಿನ ತೆರಿಗೆ.

D) ಸರಕು ಮತ್ತು ಸೇವೆಗಳ ಬಳಕೆಯ ಮೇಲೆ ವಿಧಿಸಲಾದ ತೆರಿಗೆ.

65. ಕಿನ್ನಾಳ ಕಲೆ ಯಾವ ಜಿಲ್ಲೆಗೆ ಸಂಬಂಧಿಸಿದೆ?

A) ಚಿತ್ರದುರ್ಗ

B) ಬೀದರ್

C) ಗದಗ್

D) ಕೊಪ್ಪಳ

66. ಈ ಕೆಳಗಿನ ಯಾವ ರೀತಿಯ ಮಣ್ಣು ಕರ್ನಾಟಕದಲ್ಲಿ ಹೆಚ್ಚು ಕಂಡುಬರುತ್ತದೆ?

A) ಮೆಕ್ಕಲು ಮಣ್ಣು
B) ಕೆಂಪು ಮಣ್ಣು
C) ಕಪ್ಪು ಮಣ್ಣು
D) ಲ್ಯಾಟರೈಟ್ ಮಣ್ಣು

67. ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ

1. ಹಣಕಾಸು ಮಸೂದೆಯನ್ನು ಕಡ್ಡಾಯವಾಗಿ ಮೊದಲು ಲೋಕಸಭೆಯಲ್ಲಿ ಮಂಡಿಸಬೇಕು.
2. ಲೋಕಸಭೆಯಿಂದ ಅಂಗೀಕೃತವಾದ ಹಣಕಾಸು ಮಸೂದೆಯನ್ನು ರಾಜ್ಯಸಭೆಯು ಅವಶ್ಯಕವೆನಿಸಿದರೆ ತಾನು ಇಚ್ಛಿಸುವವರೆಗೆ ತನ್ನಲ್ಲಿ ಇಟ್ಟುಕೊಳ್ಳಬಹುದು.
3. ರಾಜ್ಯಸಭೆಯು ಹಣಕಾಸು ಮಾಸೂದೆಯನ್ನು ತನ್ನ ಶಿಫಾರಸ್ಸುಗಳೊಂದಿಗೆ ೧೪ ದಿವಸದೊಳಗಾಗಿ ಲೋಕಸಭೆಗೆ ಹಿಂದುರುಗಿಸಬೇಕು.

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ

A) 1 ಮತ್ತು 2 ಮಾತ್ರ
B) 2 ಮತ್ತು 3 ಮಾತ್ರ
C) 1 ಮತ್ತು 3 ಮಾತ್ರ
D) ಮೇಲಿನ ಎಲ್ಲವು

68. ಅರಿವು ಯೋಜನೆ ___ ಗೆ ಸಂಬಂಧಿಸಿದೆ

A) ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಶುಚಿತ್ವದ ಕಿಟ್ ವಿತರಣೆ.
B) ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಕ್ಕಾಗಿ ಸಾಲ ಯೋಜನೆ.
C) ಉನ್ನತ ಶಿಕ್ಷಣ ಮತ್ತು ವಿದೇಶಿ ಶಿಕ್ಷಣಕ್ಕಾಗಿ ರೂ.20 ಲಕ್ಷದವರೆಗಿನ ಶೈಕ್ಷಣಿಕ ಸಾಲ.
D) ನಿರುದ್ಯೋಗಿ ಯುವಕರಿಗೆ 4 ಚಕ್ರ ವಾಹನಗಳನ್ನು ಖರೀದಿಸಲು 4 ಲಕ್ಷ ರೂ ವರೆಗಿನ ಸಾಲ / 75% ಒಳಗಿನ ಸಹಾಯ ಧನ.

69) ಈ ಕೆಳಗಿನ ಯಾವ ರಾಜ್ಯವು ಭಾರತದಲ್ಲಿ ಅತಿ ಹೆಚ್ಚು ಸಿರಿಧಾನ್ಯ ಉತ್ಪಾಧಿಸುತ್ತದೆ

A) ಮಹಾರಾಷ್ಟ್ರ

B) ಮಧ್ಯಪ್ರದೇಶ

C) ಕರ್ನಾಟಕ

D) ರಾಜಸ್ಥಾನ

70) ಭಾರತದಲ್ಲಿ ಒಂದು ಧಾರ್ಮಿಕ ಪಂಗಡ/ಸಮುದಾಯಕ್ಕೆ ರಾಷ್ಟ್ರೀಯ ಅಲ್ಪಸಂಖ್ಯಾತ ಸ್ಥಾನಮಾನ ನೀಡಿದರೆ, ಅದಕ್ಕೆ ಯಾವ ವಿಶೇಷ ಅನುಕೂಲಗಳು ದೊರಕುತ್ತವೆ?

1. ವಿಶೇಷ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.
2. ಭಾರತದ ರಾಷ್ಟ್ರಪತಿಗಳು ಸಮುದಾಯದ ಪ್ರತಿನಿಧಿಯನ್ನು ಲೋಕಸಭೆಗೆ ಸ್ವಯಂಚಾಲಿತವಾಗಿ ನಾಮನಿರ್ದೇಶನ ಮಾಡುತ್ತಾರೆ.
3. ಪ್ರಧಾನ ಮಂತ್ರಿಯವರ 15 ಅಂಶಗಳ ಕಾರ್ಯಕ್ರಮದಿಂದ ಪ್ರಯೋಜನಗಳನ್ನು ಪಡೆಯಬಹುದು.

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 1 ಮಾತ್ರ

B) 2 ಮತ್ತು 3 ಮಾತ್ರ

C) 1 ಮತ್ತು 3 ಮಾತ್ರ

D) 1, 2 ಮತ್ತು 3

71) ಭಾರತವು ಯುನೈಟೆಡ್ ಕಿಂಗ್ಡಮ್ ಅನ್ನು ಹಿಂದಿಕ್ಕಿ ವಿಶ್ವದ __________ ಅತಿದೊಡ್ಡ ಆರ್ಥಿಕತೆಯಾಗಿದೆ.

A) 5ನೇ

B) 6ನೇ

C) 7ನೇ

D) 8ನೇ

72) ಭಾರತದಲ್ಲಿನ ವಾಣಿಜ್ಯ ಬ್ಯಾಂಕ್‌ನ ಸ್ವತ್ತುಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದನ್ನು ಸೇರಿಸಲಾಗಿಲ್ಲ?

A) ಮುಂಗಡಗಳು

B) ಠೇವಣಿ

C) ಹೂಡಿಕೆಗಳು

D) ದೀರ್ಘಾವಧಿಯ ಸಾಲಗಳು

WWW.SHIKARAT.COM

73) ಇತ್ತೀಚೆಗೆ ನಡೆದ G20 ಶೃಂಗಸಭೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ಎಂಬ ವಿಷಯದೊಂದಿಗೆ ಭಾರತದಲ್ಲಿ 18 ನೇ G20 ಶೃಂಗಸಭೆ ನಡೆಯಿತು.
2. ಭಾರತವು 2008 ರ ಬಳಿಕ ಎರಡನೇ ಬಾರಿಗೆ G-20 ಶೃಂಗಸಭೆಯನ್ನು ಆಯೋಜಿಸಿದೆ.
3. ಇತ್ತೀಚೆಗೆ ನಡೆದ ಶೃಂಗಸಬೆಯಲ್ಲಿ ಯುರೋಪಿಯನ್ ಯೂನಿಯನ್ G-20 ಒಕ್ಕೂಟದ 21ನೇ ಸದಸ್ಯರಾಗಿ ಸೇರಿಕೊಂಡಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 1 ಮಾತ್ರ
B) 2 ಮತ್ತು 3 ಮಾತ್ರ
C) 1 ಮತ್ತು 3 ಮಾತ್ರ
D) ಮೇಲಿನ ಎಲ್ಲಾ

74) ಈ ಕೆಳಗಿನ ಯಾವ ಯೋಜನೆ/ಯೋಜನೆಗಳು ಅಲ್ಪಸಂಖ್ಯಾತ ಸಮುದಾಯಗಳ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಉಪಯುಕ್ತವಾಗಿದೆ?

1. ನಯಿ ರೋಶಿಣಿ
2. ಪಡೋ ಪರದೇಶ್
3. ಕಲಿಯಿರಿ ಮತ್ತು ಸಂಪಾದಿಸಿ (Learn and Earn)
4. ನಯಿಮಂಜಿಲ್.

ಮೇಲಿನ ಸರಿಯಾದ ಆಯ್ಕೆಯನ್ನು ಗುರುತಿಸಿ

A) 1ಮತ್ತು 2 ಮಾತ್ರ
B) 3 ಮತ್ತು 4 ಮಾತ್ರ
C) 1 , 2 ಮತ್ತು 4 ಮಾತ್ರ
D) ಮೇಲಿನ ಎಲ್ಲಾ

WWW.SHIKARAT.COM

75) 2022 ರ ಖೇಲ್ ರತ್ನ ಪ್ರಶಸ್ತಿ ಪಡೆದವರು?

A) ಮಿಥಾಲಿ ರಾಜ್
B) ರೋಹಿತ್ ಶರ್ಮಾ
C) ಅಚಂತ ಶರತ್ ಕಮಲ್
D) ಮನ್‌ಪ್ರೀತ್ ಸಿಂಗ್

76) ಅಳಿವಿನಂಚಿನಲ್ಲಿರುವ ವನ್ಯಜೀವಿಗಳು ಮತ್ತು ಸಸ್ಯಗಳ ಅಂತರಾಷ್ಟ್ರೀಯ ವ್ಯಾಪಾರದ ಸಮಾವೇಶ (CITES) ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಸರಿಯಾದ ಹೇಳಿಕೆಗಳನ್ನು ಆರಿಸಿ

1) CITES ನ ಪರಿಕಲ್ಪನೆ 1963 ರಲ್ಲಿ IUCN ನ ಸಭೆಯಲ್ಲಿ ಹುಟ್ಟಿತು.

2) ಇದು ಸದಸ್ಯ ರಾಷ್ಟ್ರಗಳ ಮೇಲೆ ಕಾನೂನು ಬದ್ಧವಾಗಿದೆ (legal binding).

A) ಕೇವಲ 1
B) ಕೇವಲ 2
C) 1 ಮತ್ತು 2 ಎರಡೂ
D) ಯಾವುದೂ ಇಲ್ಲ

77) ಪ್ರಾಣಿಗಳಲ್ಲಿ ಪರಿಸರಕ್ಕೆ ಹೊಂದಿಕೊಳ್ಳುವಿಕೆ (Adaptation ) ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಶೀತ ವಾತಾವರಣದಲ್ಲಿ ವಾಸಿಸುವ ಸಸ್ತನಿಗಳು ಶಾಖದ ನಷ್ಟವನ್ನು ಕಡಿಮೆ ಮಾಡಲು ಸಣ್ಣ ಕಿವಿ ಮತ್ತು ಕೈಕಾಲುಗಳನ್ನು ಹೊಂದಿರುತ್ತವೆ.

2. ಧ್ರುವೀಯ ಸಮುದ್ರಗಳ ಜಲಚರಗಳು ಶಾಖದ ನಷ್ಟವನ್ನು ಕಡಿಮೆ ಮಾಡಲು ಚರ್ಮದ ಕೆಳಗೆ ಕೊಬ್ಬಿನ ದಪ್ಪ ಪದರವನ್ನು ಹೊಂದಿರುತ್ತವೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A) 1 ಮಾತ್ರ
B) 2 ಮಾತ್ರ
C) 1 ಮತ್ತು 2
D) 1 ಅಥವಾ 2 ಅಲ್ಲ

WWW.SHIKARAT.COM

78) 2021-22 ರಿಂದ ಪ್ರಾರಂಭವಾಗುವ 15 ನೇ ಹಣಕಾಸು ಆಯೋಗವು ತೆರಿಗೆಗಳಲ್ಲಿ ರಾಜ್ಯಗಳಿಗೆ ಹಂಚಲು ಶೇಕಡಾ ________ ಪಾಲನ್ನು ಶಿಫಾರಸ್ಸು ಮಾಡಿದೆ.

A) 41%

B) 34%

C) 33 %

D) 50%

79) 2023 ರಲ್ಲಿ ಶಾಂಘೈ ಸಹಕಾರ ಸಂಘಟನೆಯ 23 ನೇ ಶೃಂಗಸಭೆಯನ್ನು ಯಾವ ದೇಶವು ಆಯೋಜಿಸಿದೆ?

A) ಭಾರತ

B) ಉಜ್ಬೇಕಿಸ್ತಾನ್

C) ಚೀನಾ

D) ಇರಾನ್

80) ಕೆಳಗಿನವುಗಳಲ್ಲಿ ಯಾವುದು G20 ಸದಸ್ಯ ರಾಷ್ಟ್ರವಲ್ಲ?

A) ಆಫ್ರಿಕನ್ ಯೂನಿಯನ್

B) ಟರ್ಕಿ

C) ಈಜಿಪ್ಟ್

D) ಸೌದಿ ಅರೇಬಿಯಾ

81) ಶೀತಲೀಕರಣ ಘಟಕಗಳಲ್ಲಿ ಸಂಗ್ರಹಿಸಲಾದ ಹಣ್ಣುಗಳು ದೀರ್ಘಾ ಶೇಖರಣಾ ಆಯುಷ್ಯವನ್ನು ಹೊಂದಿರುತ್ತವೆ, ಏಕೆಂದರೆ

A) ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ತಡೆಯುತ್ತದೆ.

B) ಆರ್ದ್ರತೆಯ ಹೆಚ್ಚಳವಿದೆ

C) ಪರಿಸರದಲ್ಲಿ $CO_2$ ಸಾಂದ್ರತೆಯು ಹೆಚ್ಚಾಗುತ್ತದೆ

D) ಉಸಿರಾಟ ದರ ಕಡಿಮೆಯಾಗುತ್ತದೆ

82) ಹೊಸ ಘನಾಕೃತಿಯ (Cube) ಬದಿಯು ಹಳೆಯ ಘನಾಕೃತಿಯ ಎರಡು ಪಟ್ಟಾಗಿದ್ದರೆ, ಹೊಸ ಘನಾಕೃತಿಯ ಪರಿಮಾಣ ಮತ್ತು ಹಳೆಯ ಘನಾಕೃತಿಯ ಪರಿಮಾಣದ ಅನುಪಾತವು

A) 2:1

B) 4:1

C) 8:1

D) 6:1

83) ಒಬ್ಬ ತಂದೆ ಒಂದು ಕೆಲಸವನ್ನು 6 ದಿನಗಳಲ್ಲಿ ಪೂರ್ಣಗೊಳಿಸಬಹುದು, ಆದರೆ ಮಗನ ನೆರವಿನಿಂದ 4 ದಿನದಲ್ಲಿ ಮಾಡಬಲ್ಲ. ಮಗನೊಬ್ಬನೇ ಆ ಕೆಲಸವನ್ನು ಎಷ್ಟು ದಿನಗಳಲ್ಲಿ ಮಾಡಬಲ್ಲ?

A) 6

B) 8

C) 10

D) 12

84) ಒಬ್ಬ ಅಂಗಡಿಯವನು 200 ಬಲ್ಬ್‌ಗಳನ್ನು 10 ರೂ., ಗೆ ಖರೀದಿಸಿದನು. ಅದರಲ್ಲಿ 5 ಬಲ್ಬ್ ಗಳು ಹಾಳಾಗಿದ್ದು, ಎಸೆಯಬೇಕಾಯಿತು. ಉಳಿದ ಬಲ್ಬ್‌ಗಳನ್ನು ತಲಾ 12 ರೂ.ಗೆ ಮಾರಾಟ ಮಾಡಲಾಯಿತು. ಶೇಕಡಾವಾರು ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಿರಿ.

A) 34% ಲಾಭ

B) 17% ಲಾಭ

C) 20% ಲಾಭ

D) 2.5% ಲಾಭ

85) 150 ಮೀ ಉದ್ದದ ಮತ್ತು 50 ಕಿಮೀ ವೇಗದಲ್ಲಿ ಚಲಿಸುವ ರೈಲು 27 ಸೆಕೆಂಡುಗಳಲ್ಲಿ ದಾಟಬಹುದಾದ ಸೇತುವೆಯ ಉದ್ದ ಎಷ್ಟು?

A) 375 ಮೀ

B) 225 ಮೀ

C) 525 ಮೀ

D) 270 ಮೀ

86) ಸಿಗ್ನಲ್‌ನಲ್ಲಿ ಸತತವಾಗಿ ಮೂರು ಟ್ರಾಫಿಕ್ ಲೈಟ್‌ಗಳು ಕ್ರಮವಾಗಿ 6, 18 ಮತ್ತು 20 ಸೆಕೆಂಡುಗಳ ನಂತರ ಬದಲಾಗುತ್ತವೆ. ಟ್ರಾಫಿಕ್ ಲೈಟ್‌ಗಳನ್ನು ಮೊದಲು 10:00 A.M. ಕ್ಕೆ ಸರಿಯಾಗಿ ಹಚ್ಚಿದರೆ, ಅವು ಯಾವ ಸಮಯಕ್ಕೆ ಏಕಕಾಲದಲ್ಲಿ ಬದಲಾಗುತ್ತವೆ?

A) 10:02 A.M

B) 10:03 A.M

C) 10:06 A.M

D) ಏಕಕಾಲದಲ್ಲಿ ಬದಲಾಗುವುದಿಲ್ಲ

WWW.SHIKARAT.COM

91) A ನಿಂದ Z ವರೆಗಿನ ಇಂಗ್ಲಿಷ್ ವರ್ಣಮಾಲೆಯ ಸರಣಿಯಿಂದ ಪ್ರತಿ 4ನೇ ಅಕ್ಷರವನ್ನು ಅಳಿಸಿದರೆ, ನಂತರ ಪಡೆದ ಹೊಸ ಸರಣಿಯಲ್ಲಿ ಬಲದಿಂದ 14 ನೇ ಅಕ್ಷರ ಯಾವುದು?

A) E

B) I

C) Q

D) M


92) ನೀಡಿರುವ ಪ್ರತಿಯೊಂದು ಪ್ರಶ್ನೆಗಳಲ್ಲಿ ನಾಲ್ಕು ಹೇಳಿಕೆಗಳನ್ನು ನೀಡಲಾಗಿದೆ, ನಂತರ ಅವುಗಳನ್ನು ಆಧರಿಸಿ ಮೂರು ತೀರ್ಮಾನಗಳನ್ನು ನೀಡಲಾಗಿದೆ. ಹೇಳಿಕೆಗಳನ್ನು ನಿಜವೆಂದು ಪರಿಗಣಿಸಿ ಮತ್ತು ನೀಡಿರುವ ತೀರ್ಮಾನಗಳಲ್ಲಿ ತಾರ್ಕಿಕವಾಗಿರುವ ಹೇಳಿಕೆಯನ್ನು ಗುರುತಿಸಿ –

I. ಎಲ್ಲಾ ಗೋಡೆಗಳು ಮನೆಗಳಾಗಿವೆ

II. ಎಲ್ಲಾ ಮನೆಗಳು ಬಣ್ಣಗಳಾಗಿವೆ

III. ಕೆಲವು ಬಣ್ಣಗಳು ಬಂಗಲೆಗಳಾಗಿವೆ

IV. ಯಾವುದೇ ಬಂಗಲೆಗಳು ಕಂಬಗಳಲ್ಲ.



**ತೀರ್ಮಾನಗಳು**

1. ಕೆಲವು ಮನೆಗಳು ಬಂಗಲೆಗಳು ಆಗಿರಬಹುದು
2. ಕೆಲವು ಬಣ್ಣಗಳು ಗೋಡೆಗಳಾಗಿವೆ
3. ಕೆಲವು ಬಣ್ಣಗಳು ಕಂಬಗಳಲ್ಲ.

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಕೋಡ್ ಅನ್ನು ಆಯ್ಕೆಮಾಡಿ

A) 1 ಮಾತ್ರ

B) 1 ಮತ್ತು 2 ಮಾತ್ರ

C) 2 ಮಾತ್ರ

D) 1, 2 ಮತ್ತು 3 ಮಾತ್ರ

93) A ಯು B ಯ ಪೂರ್ವ ಮತ್ತು C ನ ಪಶ್ಚಿಮದಲ್ಲಿ ಇದ್ದಾನೆ. C ಯು H ನ ನೈಋತ್ಯ ಮತ್ತು B ಯು X ನ ಆಗ್ನೇಯದಲ್ಲಿ ಇದ್ದಾನೆ. ಇವರಲ್ಲಿ ಯಾರು ಅತ್ಯಂತ ಪಶ್ಚಿಮದಲ್ಲಿ ಇದ್ದಾರೆ?

A) X
B) A
C) C
D) B

94) ಘನಾಕೃತಿಯ (Cube) ಒಂದು ಬದಿಗೆ ನೀಲಿ ಬಣ್ಣ ಹಚ್ಚಲಾಗಿದೆ. ಘನವನ್ನು 27 ಸಮಾನ ಸಣ್ಣತುಂಡಿಗಳಾಗಿದೆ ಕತ್ತರಿಸಿದರೆ, ಎಷ್ಟು ತುಂಡುಗಳಿಗೆ ನೀಲಿ ಬಣ್ಣ ಹಚ್ಚಿರುತ್ತದೆ?

A) 6
B) 9
C) 12
D) 4

95) ಇತ್ತೀಚೆಗೆ ಯಾವ ಭಾರತೀಯ ಚೆಸ್ ಆಟಗಾರ ವಿಶ್ವನಾಥನ್ ಆನಂದ್ ಅವರನ್ನು ಹಿಂದಿಕ್ಕಿ ಅಗ್ರ ಶ್ರೇಯಾಂಕಿತ ಆಟಗಾರರಾದರು? (FIDE rating)

A) ಆರ್ ಪ್ರಗ್ನಾನಂದ
B) ಡಿ. ಗುಕೇಶ್
C) ನಿಹಾಲ್ ಸರಿನ್
D) ಅರ್ಜುನ್ ಎರಿಗೈಸಿ

96) ಇತ್ತೀಚೆಗೆ ಯಾವ ಆರು ದೇಶಗಳನ್ನು ಬ್ರಿಕ್ಸ್ ಒಕ್ಕೂಟದಲ್ಲಿಸೇರಿಸಲಾಗಿದೆ?

A) ಮೆಕ್ಸಿಕೋ, ಟರ್ಕಿ, ನೈಜೀರಿಯಾ, ಇಂಡೋನೇಷ್ಯ, ಆಸ್ಟ್ರೇಲಿಯಾ ಮತ್ತು ಕೆನಡಾ.

B) ಅರ್ಜೆಂಟೀನಾ, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ, ಇಥಿಯೋಪಿಯಾ ಮತ್ತು ಈಜಿಪ್ಟ್.

C) ಪಾಕಿಸ್ತಾನ, ಬಾಂಗ್ಲಾದೇಶ, ವಿಯೆಟ್ನಾಂ, ಮಲೇಷ್ಯ, ಫಿಲಿಫೈನ್ಸ್ ಮತ್ತು ಥೈಲ್ಯಾಂಡ್.

D) ದಕ್ಷಿಣ ಕೊರಿಯಾ, ಜಪಾನ್, ಕೆನಡಾ, ಆಸ್ಟ್ರೇಲಿಯಾ, ಇಂಡೋನೇಷಿಯಾ ಮತ್ತು ಟರ್ಕಿ

SHIKARAT.COM

97) 2011 ರ ಜನಗಣತಿಯ ಪ್ರಕಾರ ಭಾರತದಲ್ಲಿರುವ ಅಲ್ಪಸಂಖ್ಯಾತರ ಶೇಕಡಾವಾರು ಜನಸಂಖ್ಯೆ ಎಷ್ಟು?

A) 20.2 %
B) 16.28%
C) 30.6%
D) 35%

98) ಸಹನಾ ಒಂದು ನಿರ್ದಿಷ್ಟ ಸ್ಥಳಕ್ಕೆ ನಡೆದುಕೊಂಡು ಹೋಗಿ, ಕಾರಿನಲ್ಲಿ ಹಿಂತಿರುಗಲು 8 ಗಂಟೆಗಳನ್ನು ತೆಗೆದುಕೊಳ್ಳುತ್ತಾಳೆ. ಕಾರಿನಲ್ಲೇ ಅದೇ ದಾರಿಯಲ್ಲಿ ಹೋಗಿ ಬರುವ ಮೂಲಕ ಅವಳು 2 ಗಂಟೆಗಳನ್ನು ಉಳಿಸಬಹುದು. ಅವಳು ಅದೇ ದಾರಿಯಲ್ಲಿ ನಡೆದುಕೊಂಡು ಹೋಗಿ ಬರುವುದಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತಾಳೆ?

A) 3 ಗಂಟೆಗಳು
B) 5 ಗಂಟೆಗಳು
C) 10 ಗಂಟೆಗಳು
D) 12 ಗಂಟೆಗಳು

99) ಮಹಿಳೆಯನ್ನು ತೋರಿಸಿ ನಿರ್ಮಲ್ ಹೇಳಿದನು, "ಅವಳು ನನ್ನ ಹೆಂಡತಿಯ ಅಜ್ಜನ ಏಕೈಕ ಮಗುವಿನ ಮಗಳು" ಮಹಿಳೆ ನಿರ್ಮಲ್‌ಗೆ ಹೇಗೆ ಸಂಬಂಧಿಸಿದ್ದಾಳೆ?

A) ಹೆಂಡತಿ
B) ಅತ್ತಿಗೆ
C) ಸಹೋದರಿ
D) ಡೇಟಾ ಅಸಮರ್ಪಕ

100) ರಂಗನಾಥ್ ಮಿಶ್ರಾ ಆಯೋಗ________ ಗೆ ಸಂಬಂಧಿಸಿದ್ದು.

A) ಒಂದು ರಾಷ್ಟ್ರ ಒಂದು ಚುನಾವಣೆ .

B) ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ.

C) ನಗರ ಸ್ಥಳೀಯ ಚುನಾವಣೆಯಲ್ಲಿ ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯವನ್ನು ಅಧ್ಯಯನ ಮಾಡಲು.

D) ಅಸ್ತಿತ್ವದಲ್ಲಿರುವ ಪರಿಸರ ಸಂರಕ್ಷಣಾ ಕಾನೂನನ್ನು ಪರಿಶೀಲಿಸಲು.

**********